ನೀವು ಯಾವ ದಿನಾಂಕದಂದು ಬಾಂಡ್‌ಗಳನ್ನು ನೀಡುತ್ತೀರಿ ಎನ್ನುವ ಬಗ್ಗೆ ಸ್ಪಷ್ಟನೆ ನೀಡಬೇಕೆಂದು ಮಾನ್ಯ ಸಚಿವರಿಗೆ ಕೇಳುತ್ತೇನೆ.

ಶ್ರೀ ಕಳಕಪ್ಪ ಜಿ. ಬಂಡಿ :- ಮಾನ್ಯ ಅಧ್ಯಕ್ಷರೆ, 2006-07ರಿಂದ ಇಲ್ಲಿಯತನಕ 48,130 ಮಕ್ಕಳಿಗೆ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಬಾಂಡ್ ಗಳನ್ನು ಕೊಡಬೇಕಾಗಿರುವುದು ನಿಂತಿತ್ತು. ನಾವು ಈಗ ಸಂಪೂರ್ಣವಾಗಿ 48,130 ಹೆಣ್ಣುಮಕ್ಕಳಿಗೆ ಬಾಂಡ್‌ಗಳನ್ನು ಕೊಡುವುದಕ್ಕೆ ಆದೇಶ ಮಾಡಿದ್ದೇವೆ. ಈಗ ಸುಮಾರು 25,000 ಬಾಂಡ್‌ಗಳನ್ನು ಕೂಡ ವಿತರಣೆ ಮಾಡಿದ್ದೇವೆ. ಇನ್ನು 23,000 ಬಾಂಡ್‌ಗಳನ್ನು ಇನ್ನು 15 ದಿವಸದಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆಂದು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು :- ಆಯಿತು, ಈಗ ಸಿ.ಎಸ್. ನಾಡಗೌಡರು ಕೇಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್ ಆದೇಶ ನೀಡಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಇದು ಬಹಳ ಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು :- ಈಗ ಪ್ರಶ್ನೆಗಳು ಆಗಲಿ, ಇನ್ನು ಎರಡು ಪ್ರಶ್ನೆ ಇದೆ, ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು :- ಎರಡು ಪ್ರಶ್ನೆ ಮುಗಿಸಿ ತೆಗೆದುಕೊಳ್ಳಬಹುದಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೆ, ಸರ್ಕಾರದ ನಿಲುವು ಸ್ಪಷ್ಟಪಡಿಸಬೇಕು. ಇದು ಬಹಳ ಆಘಾತಕಾರಿಯಾದಂತಹ ಒಂದು ಆದೇಶ. ಏಕೆಂದರೆ ನಮ್ಮ ಹತ್ತಿರ ಬಿಡುವುದಕ್ಕೆ ನೀರೇ ಇಲ್ಲ. ರೈತರ ಬೆಳೆಗಳೆಲ್ಲ ಒಣಗುತ್ತಿವೆ. ಬೆಂಗಳೂರಿನ ಜನಕ್ಕೆ ಕುಡಿಯುವುದಕ್ಕೆ ನೀರಿಲ್ಲ. ಬೇರೆ ಪಟ್ಟಣಗಳವರಿಗೆ ಕೂಡ ಕುಡಿಯುವುದಕ್ಕೆ ನೀರಿಲ್ಲದ ಹಾಗೆ ಆಗುತ್ತದೆ. ಇದು ಬಹಳ ಅಪಾಯಕಾರಿಯಾದಂತಹ ಬೆಳವಣಿಗೆ. ನಾನು ಒತ್ತಾಯ ಮಾಡುವುದೇ-

ನೆಂದರೆ ಸರ್ಕಾರದ ನಿಲುವು ಏನು ಎಂದು ಹೇಳಬೇಕು. ಇದರ consequences ಏನಾಗುತ್ತದೆ? ನಮ್ಮ ಹತ್ತಿರ ನೀರಿಲ್ಲ ಎನ್ನುವುದನ್ನೇ ಹೇಳಬೇಕಾಗುತ್ತದೆ. ನಮಗೆ ಕುಡಿಯುವುದಕ್ಕೆ ನೀರಿಲ್ಲ, 35-34 TMC ನೀರು ಇದೆ. ನಮ್ಮ ಬೆಳೆಗಳೆಲ್ಲ ಒಣಗಿ ಹೋಗುತ್ತಿವೆ. ನಮಗೆ ಈ ಸಮಯದಲ್ಲಿ ನೀರು ಬೇಕು. ಈಗ ಭತ್ತ ಕಾಳು ಆಗುತ್ತಿದೆ.

ಅಧ್ಯಕ್ಷರು :- ಈಗ ಎರಡು ಪ್ರಶ್ನೆಗಳು ಇವೆ, ಮುಗಿಸಿಬಿಡೋಣ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರ ಕೊಡಬೇಕು. ಅವರ stand ಏನೆಂದು ಹೇಳಬೇಕು ಅಲ್ಲವೇ? ಇದರ ವಿಚಾರದಲ್ಲಿ ಅವರ ನಿಲುವು ಏನೆಂದು ಹೇಳಬೇಕಲ್ಲ. ಇದು ಬಹಳ serious matter. It is a very serious matter. ಇಡೀ ರಾಜ್ಯ ಅಲ್ಲೋಲಕಲ್ಲೋಲ ಆಗಿಬಿಡುತ್ತದೆ. ನಾಳೆ ಜನ ಬೀದಿಗೆ ಬರುತ್ತಾರೆ. ಚಳುವಳಿ ಆಗುತ್ತದೆ, ಕಾನೂನು ಸುವ್ಯವಸ್ಥೆ ಹಾಳಾಗುತ್ತದೆ. It is a very serious matter.

ಅಧ್ಯಕ್ಷರು :- ರೇವಣ್ಣನವರು ಮಾತನಾಡಿ, ಹೇಳಿ. ನಾನು ರೇವಣ್ಣನವರಿಗೆ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:- ಸರ್ಕಾರದ ನಿಲುವು ಏನು ಎಂದು ಹೇಳಿ.

ಅಧ್ಯಕ್ಷರು :- ನಾನು ರೇವಣ್ಣನವರನ್ನು ಕರೆದಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :- ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರದ ಧೋರಣೆಯಿಂದ ಕಾವೇರಿ ಕಣಿವೆ ರೈತರಿಗೆ ತೊಂದರೆಯಾಗಿದೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ:- ನೀವೇ ನೀರು ಬಿಡಿ ಎಂದು ಮೊನ್ನೆ ಹೇಳಿದ್ದೀರಿ. ನೀರು ಬಿಡಿ ಎಂದು ಹೇಳಿದ್ದು ಯಾರು? ನೀವು ಹೇಳಿದವರು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : – ಅಲ್ಲಿ ನೀರು ಬಿಡಿ ಎಂದು ಹೇಳಿ, ಇಲ್ಲಿ ಬಂದು ಭಾಷಣ ಮಾಡುತ್ತೀರಾ..?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ :- ನೀರು ಬಿಡಬೇಕು ಎಂದು ಹೇಳಿದವರು ಜೆ.ಡಿ.ಎಸ್.ಪಕ್ಷದವರು.

(ಗೊಂದಲ)

ಅಧ್ಯಕ್ಷರು:- ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದಿದೆಯೆಂಬ ವಿಷಯ ಮಾಧ್ಯಮಗಳ ಮೂಲಕ ತಿಳಿದು ಬಂದಿದೆ. ದಯಮಾಡಿ ಏನಾಗಿದೆ ಎಂಬುದನ್ನು ಹೇಳಿ. ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ, ಆರೋಪ ಮಾಡುವುದಕ್ಕೆ ದಯಮಾಡಿ ಈ ವೇದಿಕೆಯನ್ನು ಬಿಟ್ಟು ಕೊಡಬೇಡಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ರೇವಣ್ಣನವರೆ, ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಾನು writing ನಲ್ಲಿ ಕೊಟ್ಟಿದ್ದೇನೆ.

ಅಧ್ಯಕ್ಷರು:- ಇನ್ನು ಎರಡೇ ಎರಡು ಪ್ರಶ್ನೆಗಳು ಇವೆ, ಅದನ್ನು ಮುಗಿಸಿದರೆ ಏನಾಗುತ್ತದೆ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:- ನಾನು writing ನಲ್ಲಿ ಕೊಟ್ಟಿದ್ದೇನೆ, ನನಗೆ ಮಾತನಾಡಲು ಅಧ್ಯಕ್ಷರು ಕರೆದಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಹೀಗೆ ಮಾಡಿದರೆ ಹೇಗೆ ಸದನ ನಡೆಸುವುದು?

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಾನು writing ನಲ್ಲಿ ಕೊಟ್ಟಿದ್ದೇನೆ.

ಅಧ್ಯಕ್ಷರು:- ನಾನು ಎರಡು ಪ್ರಶ್ನೆಗಳನ್ನು ಮುಗಿಸಿ, ಅದು ಆದ ತಕ್ಷಣ ನಿಮಗೆ ಅವಕಾಶವನ್ನು ಕೊಡುತ್ತೇನೆ. Only two questions.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಡಿ, ಅಯಿತು, ಪ್ರಶ್ನೆಗಳನ್ನು ಮುಗಿಸಿ, ನನಗೆ ಅವಕಾಶ ಕೊಡಿ.

ಅಧ್ಯಕ್ಷರು: ಎರಡು ಪ್ರಶ್ನೆಗಳು ಇವೆ. ಅವಕಾಶ ಕೊಡುತ್ತೇನೆ. ಮುಗಿಸಿಬಿಡೋಣ. ಐದು ನಿಮಿಷಗಳಲ್ಲಿ ಮುಗಿಯುತ್ತದೆ.

ಪ್ರಾಥಮಿಕ & ಪ್ರೌಢಶಾಲೆಗಳ ಪ್ರಾರಂಭ

14 (7)

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ

(ಮುದ್ದೇಬಿಹಾಳ)

ಅ) ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. (ವಿವರ ನೀಡುವುದು);

ಇ) ರಾಜ್ಯದ ಉತ್ತರ ಕರ್ನಾಟಕ ಜಿಲ್ಲೆಗಳಿಗೆ ಹೊಸದಾಗಿ ಎಷ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರದ ಮುಂದಿದೆ (ವಿವರ ನೀಡುವುದು)?

ಈ) ಮುದ್ದೇಬಿಹಾಳ ಮತ ಕ್ಷೇತ್ರದದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?